# ನಕ್ಕುಬಿಡಿ




ಹತ್ತು ವರ್ಷದ ಹಿಂದೆ ದೇವಸ್ಥಾನವೊಂದಕ್ಕೆ ಹೋಗಿದ್ದಾಗ ಅಲ್ಲಿ ಒಂದು ಫಲಕ ಹೀಗಿತ್ತು;

'ಮೊಬೈಲ್ ಫೋನ್ ತರುವಂತಿಲ್ಲ'

ಐದು ವರ್ಷದ ಹಿಂದೆ ಅದೇ ಜಾಗದಲ್ಲಿ ಫಲಕ ಹೀಗಿತ್ತು; 'ಮೊಬೈಲ್ ಸ್ವಿಚ್ ಆಫ್ ಮಾಡಿ'

ಕಳೆದ ವರ್ಷ ಹೋದಾಗ ಅದೇ ಜಾಗದಲ್ಲಿ ಫಲಕ ಹೀಗಿತ್ತು;

'ಮೊಬೈಲ್ ಸೈಲೆಂಟ್ ಆಗಿಡಿ!'

ನಿನ್ನೆ ಹೋದಾಗ ಹೀಗಿತ್ತು;

'ದೇವರೊಂದಿಗೆ ಸೆಲ್ಫಿಗೆ ರೂ. 500!'

★★★

ಆಫೀಸಿನಿಂದ ಬಂದ ಗುಂಡ ತನ್ನ ನವವಿವಾಹಿತ ಪತ್ನಿಗೆ ಹೇಳಿದ: ಇವತ್ತು ನೀನು ಏನು ಅಡುಗೆ ಮಾಡಿರುವೆ ಎಂದು ನಾನು ಹೇಳಲೆ?'

ಪತ್ನಿ: ಹೇಳಿ ನೋಡೋಣ.

ಪತಿ: ಇವತ್ತು ನೀನು ಬರೀ ತರಕಾರಿ ಗೊಜ್ಜು ಮಾತ್ರ ಮಾಡಿರುವೆ.

ಪತ್ನಿ: ನಿಮಗೆ ಹೇಗೆ ಗೊತ್ತಾಯಿತು?

ಪತಿ: ಏಕೆಂದರೆ ಇವತ್ತು ಅಡುಗೆ ಮನೆಯಿಂದ ಯಾವುದೇ ಸುಟ್ಟ ವಾಸನೆ ಬರುತ್ತಿಲ್ಲ.

★★★

ಇಬ್ಬರು ಮಹಿಳೆಯರು ಪರಸ್ಪರ ಮಾತನಾಡುತ್ತಿದ್ದರು.

ಒಬ್ಬಾಕೆ: ನನ್ನ ಮಗಳು ಕೆಲಸಕ್ಕೆ ಹೋಗ್ತಾಳೆ ಅದಕ್ಕೇ ಅಡುಗೆ ತಿಂಡಿ ಮಾಡೋದು ಕಲಿತಿಲ್ಲ.

ಇನ್ನೊಬ್ಬಾಕೆ: ನನ್ನ ಮಗನಿಗೆ ಕೆಲಸ ಸಿಕ್ಕಿಲ್ಲ. ಅದಕ್ಕೆ ಅಡುಗೆ ಕಲಿತಿದ್ದಾನೆ!

★★★

ಗುಂಡ: ಸ್ವಾಮಿ ತಾವು ದೊಡ್ಡ ಸಾಹಿತಿಗಳು. ತಾವು ಬರೆದಿರೋದು ಯಾವುದಾದರೂ ಮಾರಾಟ ಆಗಿದೆಯಾ?

ಸಾಹಿತಿ: ಹೌದು. ಮಾರಾಟ ಆಗಿದೆ.

ಗುಂಡ: ಯಾವ್ಯಾವ್ದು ಮಾರಾಟವಾಗಿದೆ?

ಸಾಹಿತಿ: ನಮ್ಮ ಮನೆ ಸೋಫಾ, ಫ್ರಿಡ್ಜ್, ವಾಶಿಂಗ್‌ಮೆನ್, ಟಿ.ವಿ.!

★★★

ಗೋಪಿ: ನಾನು ನಿಮ್ಮನ್ನೆಲ್ಲೋ ನೋಡಿದ್ದೇನೆ. ಫೇಸ್‌ಬುಕ್‌ನಲ್ಲಿದ್ದೀರಾ?

ಗುಂಡ: ಇಲ್ಲ.

ಗೋಪಿ: ಲಿಂಕ್ಡ್ ಇನ್‌ನಲ್ಲಿರಬೇಕಲ್ವಾ?

ಗುಂಡ: ಇಲ್ಲ.

ಗೋಪಿ: ಹಾಗಿದ್ರೆ ನಿಮ್ಮ ವಾಟ್ಸಾಪ್‌ನಲ್ಲಿಲ್ಲಿ ನಾನು ನೋಡಿರಬೇಕು.

ಗುಂಡ: ನನಗೆ ವಾಟ್ಸಾಫ್ ಅಕೌಂಟೇ ಇಲ್ಲ!

ಗೋಪಿ: ನಿಮ್ಮಲ್ಲಿ ನನ್ನ ಈ ಮೇಲ್ ಐಡಿ ಇದೆಯಾ?

ಗುಂಡ: ಇಲ್ಲ ಕಣ್ರೀ!

ಗೋಪಿ: ವೆಬ್ ಕಾನ್ಫರೆನ್ಸ್‌ನಲ್ಲಿ ನಾವು ಮುಖಾಮುಖಿಯಾಗಿದ್ದೇವಾ?

ಗುಂಡ: ಇಲ್ಲ ಸಾಧ್ಯವೇ ಇಲ್ಲ. ನಾನೇನು ಅಂಥ ದೊಡ್ಡ ಹುದ್ದೆಯಲ್ಲಿಲ್ಲ!

ಗೋಪಿ: ಇನ್ನೆಲ್ಲಿ ನಾನು ನಿಮ್ಮನ್ನು ನೋಡಿರಲು ಸಾಧ್ಯ?

ಗುಂಡ: ಕಳೆದೆರಡು ವರ್ಷಗಳಿಂದ ನಾನು ನಿಮ್ಮ ಪಕ್ಕದಮನೆಯಲ್ಲಿ ವಾಸವಾಗಿದ್ದೇನೆ ಕಣ್ರೀ!

**(ಸಂಗ್ರಹ) ಕುಬೇರಪ್ಪ. ಎಂ. ವಿಭೂತಿ, ಹರಿಹರ**

ಗೆಳೆಯ: ನನ್ನ ಮೋಸ ಮಾಡಿದ ಆ ಕಿಟ್ಟನಿಗೆ ಸರಿಯಾದ ಶಿಕ್ಷೆ ಕೊಡು ಅಂತ ಹರಕೆ ಮಾಡ್ಕೊಂಡಿದೀನಿ.

ಗುಂಡ: ಯಾವಾಗ?

ಗೆಳೆಯ: ಮೊನ್ನೆ ದಿನ.

ಗುಂಡ: ಅಬ್ಬ! ನಿನ್ನ ಆ ದೇವರು ಫಾಸ್ಟ್ ಮತ್ತು ಪ್ರಾಂಪ್ಟ್. ನಿನ್ನೆ ಕಿಟ್ಟನ ಮದುವೆ ಫಿಕ್ಸ್ ಆಯ್ತಂತೆ.

★★★

ಗುಂಡನ ಪತ್ನಿ: ನಾಳೆಯಿಂದ ಕೆಲ್ಸಕ್ಕೆ ಬರ್ಬೇಡ, ನಾನು ಫೋನ್ ಮಾಡೋವರೆಗೂ.

ನಿಂಗಿ: ಗೊತ್ತಾತು, ಬಿಡಿ.

ಗುಂಡ ಪತ್ನಿ: ಏನು ನಿನ್ಗೆ ಗೊತ್ತಾಗಿದ್ದು?

ನಿಂಗಿ: ನಿಮ್ಮತ್ತೆ, ಮಾವ ಬತ್ತಾ ಅವ್ರೆ.

ಗುಂಡನ ಪತ್ನಿ: (ಭಿಕ್ಷುಕನಿಗೆ) ಸಲ್ಮಾನ್ ಖಾನ್ ತರ ಗಟ್ಟಿ ಮುಟ್ಟಾಗಿದೀಯ, ದುಡಿಯೋಕೇನು ದಾಡಿ?

ಭಿಕ್ಷುಕ: ನಿಮಗ್ಗೊತ್ತ ಮೇಡಂ, ನೀವು ಮುಂದಿನಿಂದ ರಮ್ಯಾ ತರ, ಆ ಕಡೆಯಿಂದ ಪೂಜಾತರ, ಸೈಡಿಂದ ಭಾವನಾ...

ಗುಂಡನ ಪತ್ನಿ: ಇರು, ಇಲ್ಲೇ ಇರು, ಬಿಸಿ ಬಿಸಿ ಪಾಯಸ ಇದೆ, ತರ್ತೀನಿ.

**(ಸಂಗ್ರಹ) ಹ್ಯಾಡ ಬ.ದಯಾನಂದ, ಮೈಸೂರು**


DARSHAN
BLACK
STONE
ಅಗರ್‌ಬತ್ತಿ




ಪ್ರತಿ ಆರಂಭವು ಶುಭವಾಗಿರಲಿ

DARSHAN INTERNATIONAL
Bangalore - 560 018. INDIA
Website : www.darshanincense.com
customercare@darshanincense.com
For Trade Call : 080-66795555